Construction of Bridge across Kabini River near Nanjangud

1102. SRI K. B. SHIVAIAH (Nanjangud).—Will the Minister for Public Works be pleased to state :—

(a) the person to whom the contract work pertaining to the construction of bridge across Kabini river near Nanjangud, has been entrusted ;

(b) the date on which the said work has been handed over to the Karnataka State Construction Corporation Ltd., by the contractors ;

(c) the stage at which the said bridge work stands now ;

(d) the period required to complete this work ;

(e) the additional expenditure to be incurred than the earlier estimated cost due to this delay ?

SRI KAGODU THIMMAPPA (Minister for Public Works). —

(a) This bridge work has been entrusted to Sri Boraiah Basavaiah & sons, contractor.

(b) This work has been entrusted to the Karnataka State Construction Corporation Ltd., on 21-5-1976 by the Government.

(c) The R.C.C. deck slabs have been put to 7 spans out of 11 spans. The decking work is under progress in respect of the remaining 4 spans.

(d) This work is expected to be completed by October 1982.

(e) A sum of about Rs. 29,64,800 additional expenditure would be incurred than the earlier estimated Cost.

ಶ್ರೀ ಕೆ. ಬಿ. ಶಿವಯ್ಯ.—ಕಂಟ್ರಾಕ್ಟರ್ ಶ್ರೀ ಬೋರಯ್ಯ ಬಸವಯ್ಯ ಮತ್ತು ಮಕ್ಕಳು ಇವರಿಗೆ ವರ್ಕ್ ಆರ್ಡರ್ ಯಾವಾಗ ಕೊಟ್ಟಿದ್ದು. ಈ ಸೇತುವೆ ಕೆಲಸದ ಟೆಂಡರ್ ಅಂದಾಜು ಮೊಬಲಗೆಷ್ಟು ?

ಶ್ರೀ ಕಾಗೋಡು ತಿಮ್ಮಪ್ಪ.—ಇದು ಮೊದಲು ಸುಮಾರು ೧೭ ಲಕ್ಷ ೧೫ ಸಾವಿರ ರೂಪಾಯಿ ಗಳಿಗೆ ಅಂದಾಜು ತಯಾರಾಗಿತ್ತು. ೧೯೭೫ರಲ್ಲಿ ಶ್ರೀ ಬೋರಯ್ಯ ಬಸವಯ್ಯ ಮತ್ತು ಮಕ್ಕಳು ಇವರಿಗೆ ಕೊಟ್ಟಿದ್ದು. ಇವರು ಸುಮಾರು ೧೦ ಲಕ್ಷದ ೬ ಸಾವಿರ ರೂಪಾಯಿ ಕೆಲಸ ಮಾಡಿ ಬಿಟ್ಟುಬಿಟ್ಟರು. ತದ ನಂತರ ಕರ್ನಾಟಕ ಕನ್‌ಸ್ಟ್ರಕ್ಷನ್‌ಗೆ ಕಾರ್ಪೊರೇಷನ್‌ಗೆ ವಹಿಸಿಕೊಟ್ಟಿದೆ.

ಶ್ರೀ ಕೆ. ಬಿ. ಶಿವಯ್ಯ.—ಈ ಟೆಂಡರ್ ವರ್ಕ್ ಆರ್ಡರ್ ಕೊಡುವಾಗ ಅದರಲ್ಲಿ ಕಾಲದ ನಿಯಮ ವನ್ನು ಏನಾದರೂ ಗೊತ್ತುಪಡಿಸಿದ್ದರೆ ? ಹಾಗೆ ಅವರು ಆ ನಿಯಮವನ್ನು ಏನಾದರೂ ಮೀರಿ ದ್ದಾರೆಯೇ ? ಆ ರೀತಿ ಏನಾದರೂ ನಿಯಮ ಮೀರಿದ್ದರೆ ಅವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಟೆಂಡರ್ ಕೊಡಬೇಕಾದರೆ, ಅದರಲ್ಲಿ ಇಷ್ಟು ದಿವಸದಲ್ಲಿ ಪೂರೈಸ ಬೇಕೆಂದು ಟೈಮ್ ಇರುತ್ತದೆ, ಅವರು ಆ ಕಾಲಕ್ಕೆ ಸರಿಯಾಗಿ ಪೂರೈಸಲಿಲ್ಲ. ಆದ್ದರಿಂದ ಅವರ ಟೆಂಡರ್ ಟರ್ಮಿನೇಟ್ ಮಾಡಿ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಡಲಾಗಿದೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಅದರ ಬಗ್ಗೆ ಕಂಟ್ರಾಕ್ಟ್ ಅಗ್ರಿಮೆಂಟ್‌ನಲ್ಲಿ ಏನು ಕಂಡೀಷನ್ ಇದೆಯೋ ಅದನ್ನು ಎನ್‌ಫೋರ್ಸ್ ಮಾಡುತ್ತೇವೆ.

ಶ್ರೀ ಕೆ. ಬಿ. ಶಿವಯ್ಯ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ೨೧–೫–೧೯೭೬ರಲ್ಲಿ ವಹಿಸಿ ಕೊಟ್ಟಿದೆ ಎಂದು ತಿಳಿಸಿದ್ದೀರಿ. ಅವರಿಗೆ ವಹಿಸಿಕೊಡುವಾಗ ಕಾಲವನ್ನು ಗೊತ್ತುಪಡಿಸಿದ್ದೀರಾ ? ಅದರಿಂದ ಸರ್ಕಾರಕ್ಕೆ ಎಷ್ಟು ಹೆಚ್ಚುವರಿ ಹಣ ಖರ್ಚಾಗಿದೆ. ಎಸ್ಟಿಮೇಟ್ ಎಷ್ಟು ಸಾರಿ ರಿವೈಸ್ ಆಗಿದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಅವರಿಗೆ ಕೊಡುವಾಗ ಕಾಲ ಗೊತ್ತುಪಡಿಸಿಲ್ಲ. ಸರ್ಕಾರದ ಒಂದು ಆಜ್ಞೆ ಪ್ರಕಾರ ಅವರಿಗೆ ಕೆಲಸ ವಹಿಸಿ ಷೆಡ್ಯೂಲ್ ಡೇಟ್‌ನಲ್ಲಿ ನಿಗದಿಯಾಡ ಪರ್‌ಸೆಂಟೇಜ್ ಪ್ರಕಾರ ಕೊಡಬೇಕು ಅಂಥ ಇದೆ. ಅದು ಒಂದು ಸರ್ಕಾರದ ಜನರಲ್ ಆಜ್ಞೆ ಇದೆ, ಆ ಪ್ರಕಾರ ಕೊಟ್ಟಿದ್ದೇವೆ. ಈ ಕೆಲಸಕ್ಕೆ ನಿಗದಿಯಾದಂಥ ಕಾಲವನ್ನು ಹಾಕಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಈ ಸೇತುವೆಯನ್ನು ಗವರ್ನ್‌ಮೆಂಟ್ ಆಫ್ ಇಂಡಿಯಾ ರ್ಸ್‌ಟಿಗೆರಲ್ಲಿ ಸ್ಯಾಂಕ್ಷನ್ ಮಾಡಿದರು, ೮ ಲಕ್ಷಕ್ಕೆ ಮಾಡಿದ್ದು ಗೊತ್ತಿದೆ. Now the cost has gone up to Rs. 50 lakhs or so. Who will pay the difference ? I would like to know whether the Central Government is paying or the State Govt. is paying this difference.

SRI KAGODU THIMMAPPA.—The Central Government is paying.

SRI M. C. BASAPPA.—The entire amount is paid by the Central Government.

ಶ್ರೀ ಕೆ. ಬಿ. ಶಿವಯ್ಯ.—ಹೆಚ್ಚುವರಿ ಕಾಲ ತೆಗೆದುಕೊಂಡು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವ ಈ ಅನುಪಯುಕ್ತವಾದಂಥ ಸಂಸ್ಥೆಯನ್ನು ಆದಷ್ಟು ಶೀಘ್ರದಲ್ಲಿ ರದ್ದುಪಡಿಸಲಿಕ್ಕೆ ಸರ್ಕಾರದ ಆಲೋಚನೆ ಏನಾದರೂ ಇದೆಯೇ ? ಹಾಗೇನಾದರೂ ಇದ್ದರೆ ಯಾವಾಗ ರದ್ದುಪಡಿಸುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಸದ್ಯಕ್ಕೆ ಆ ಕಾರ್ಪೊರೇಷನ್ ರದ್ದು ಮಾಡಬೇಕೆಂಬ ಸ್ಥಿತಿ ನಮ್ಮ ಮುಂದೆ ಇಲ್ಲ. ಅದಕ್ಕೆ ಸಾಕಷ್ಟು ಕೆಲಸ ಕೊಟ್ಟರೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಬಹುದು ಅಂಥ ಇದೆ. ಕೆಲವೊಂದು ಕೊರತೆ ಇದೆ. ಅದನ್ನು ಪರಿಹರಿಸಬೇಕಾಗಿದೆ. ಈ ಕೆಲಸ ಈಗಾಗಲೇ ಮುಗಿಯುತ್ತಾ ಬಂದಿದೆ. ಕಳೆದ ಒಂದು ವರ್ಷದಲ್ಲಿ ಸಾಕಷ್ಟು ಕೆಲಸವಾಗಿದೆ. ಅವರಿಗೆ ಸಿಮೆಂಟ್ ತೊಂದರೆ, ಹಣಕಾಸಿನ ತೊಂದರೆಗಳಿದ್ದವು, ಈಗ ಅವು ನಿವಾರಣೆಯಾಗಿದೆ, ಆಕ್ಟೋಬರ್ ತಿಂಗಳಿನಲ್ಲಿ ಪೂರೈಸಬೇಕೆಂದು ನಿರ್ಧಾರ ಮಾಡಿದ್ದಾರೆ, ಆ ಕೆಲಸವನ್ನು ಪೂರೈಸುತ್ತಾರೆ.

SRI S. R. BOMMAI.—Sir, this is an important question involving the entire state i.e., cancellation of contracts. That is why I would like to ask one or two supplementaries. Otherwise, I would not have asked. Sir, here the contract of the previous Boraiah and Basavaiah sons has been cancelled ; re-tender has been done. The difference will have to be recovered from the Contractors, as per the terms of the agreement and also as per the PWD code. In a number of cases, such cancellations were done but no timely action is taken with the result the claims were time-barred. The next man will take another ten years. When the Government will recover the difference from the earlier contractor as per the terms of agreement ? If you don't take timely action, the claim will be time-barred. Therefore, within the time limit, will you take action to recover the difference from the earlier Contractor ? So far as this defaulting Contractor is concerned, I request the Government to

take action to recover the difference from the previous Contractor within the time limit so that the claim will not become time barred-

SRI KAGODU THIMMAPPA.—I will go through the previous records. The suggestion of the Hon'ble Member will be taken note of.

ಶ್ರೀ ಎಚ್ ಗಂಗಾಧರನ್.—ರೆಕವರಿ ಮಾಡಲಿಕ್ಕೆ ಸಾಧ್ಯವಿಲ್ಲ. Insolvency application ಹಾಕಿದ್ದಾರೆ, ಈ ಸೇತುವೆಗೆ ಕನ್ ಸರ್ನ್ ಇದ್ದ ಹಾಗೆ ಕೊಟ್ಟಿಂಥ ಸಿಮೆಂಟ್ ಅಧಿಕಾರಿಗಳಿಂದ ದುರುಪ ಯೋಗವಾಗಿದೆ ಅಂಥ ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ಗಮನಕ್ಕೆ ಬಂದಿಲ್ಲ, ಮಾನ್ಯ ಸದಸ್ಯರು ಮಾಹಿತಿ ಕೊಟ್ಟರೆ ತನಿಖೆ ಮಾಡಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ನಾನು ಮುಖ್ಯಮಂತ್ರಿಗಳಿಗೂ ತಮಗೂ ಪತ್ರ ಬರೆದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಏನು ಆಪಾದನೆ ಮಾಡಿದ್ದೀರಾ ಅದನ್ನು ಎಸ್.ವಿ.ಸಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಕೆ. ಬಿ. ಶಿವಯ್ಯ.—ಬರುವ ಅಕ್ಟೋಬರ್ ತಿಂಗಳಲ್ಲಿ ಮುಗಿಸುತ್ತೇವೆಂದು ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಾರೆ. ಈ ಅಪ್ರೋಚ್ ರೋಡ್‌ಗಳನ್ನು ಮಾಡಿಸಬೇಕಾದರೆ ಟೆಂಡರ್‌ಗೆ ಕೊಡಬೇಕಾಗುತ್ತದೆ. ಅದೆಲ್ಲಾ ಆಗಬೇಕಾದರೆ ಒಂದು ವರ್ಷ ಆಗುತ್ತದೆ. ಆದ್ದರಿಂದ, ಈ ಟೆಂಡರ್ ಕರೆಯುವುದನ್ನು ಬಿಟ್ಟು, ಇಲಾಖೆಯ ಪತಿಯಿಂದಲೇ ಈ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಇಲಾಖೆಯವರೇ ನೇರವಾಗಿ ಮಾಡುತ್ತಾರೆ. ಈಗಾಗಲೇ ನಾವು ಎರಡು ಸಾರಿ ಹೋಗಿ ನೋಡಿಕೊಂಡು ಬಂದಿದ್ದೇವೆ. I am also equally interested to see that this must be completed as early as possible.

MR. SPEAKER.—Question hour is over.

Presentation of the Report

Fifth Report of the Committee on Private Members Bills as Resolutions

SRI BABU RAO HULSURKAR (Deputy Speaker)—Sir, I present the Fifth Report of the Committee on Private Members' Bills and Resolutions.

ಶ್ರೀ ಡಿ. ಟಿ. ಮಾಯಣ್ಣ.—ಈ ವರದಿಯನ್ನು ಮಾನ್ಯ ಸಭೆಯು ಅನುಮೋದಿಸಬೇಕೆಂದು ಪ್ರಾರ್ಥಿಸುತ್ತೇನೆ.

MR. SPEAKER.—I think the House agrees with the Report.

ಮ ನ ವಿ ಗ ಳು

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮುಂದಿನ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಮೊದಲು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ ಇವತ್ತಿನ ಪತ್ರಿಕೆಯಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿಂಥ ಒಂದು ಮಹತ್ವದ ಸುದ್ದಿ ಬಂದಿದೆ. ಈಗಿನ ಮುಖ್ಯ ಮಂತ್ರಿಗಳು ಬದಲಾವಣೆಯಾಗಿ ಯಾರೋ ಬೀದರ್‌ನ ಎಂ.ಪಿ. ಒಬ್ಬರು ಇಲ್ಲಿಗೆ ಮುಖ್ಯ ಮಂತ್ರಿಗಳಾಗಿ ಬರುತ್ತಾರೆಂದೂ, ಇವರು ಕೇಂದ್ರಕ್ಕೆ ಹೋಗುತ್ತಾರೆಂದೂ ತಿಳಿದುಬಂದಿದೆ. ಈಗಿನ ಮುಖ್ಯ ಮಂತ್ರಿಯವರು ಚುನಾವಣೆ ಆಗುವವರೆಗೂ ಇರುತ್ತಾರೆ, ಅವರ ಪಕ್ಷವೇ ಚುನಾವಣೆಯಲ್ಲಿ ಗೆದ್ದು ಬಂದರೆ